Regd No M 1299

॥ ಸತ್ಯಾನ್ನಾ ಸ್ತ್ಯ ಪರೋಧರ್ಮಃ ॥

ಬಿಡಿ ಪ್ರತಿ 3 ಪೈ

SATYAVADI

Founded 1917

Published Every Wednesday

ಪ್ರತಿ ಬುಧವಾರ

ಸತ್ಯವಾದಿ

ಅರಮನೆ ಸರಸ್ವೀದಾರ್ ಎಂ. ಪಿ. ಸುಬ್ಬರಾಯರಿಂದ ಪ್ರತಿಷ್ಠಿತಪಾದುದು

ವಾರ್ಷಿಕ ಚಂದಾ ಸ್ಥಳಕ್ಕೆ ರೂ. 1

ಪರಸ್ಥಳಕ್ಕೆ 1—10—0

ಸಂಪುಟ 21] 13—7—1938 [ಸಂಚಿಕೆ 43

ಈ ವಾರ

Suggestions to
Commonsense Cross Word
No. 129

ಚಿತ್ರಶಾಲೆ ನಂ. ೫೪ ಸಲಹೆಗಳು

ಐಶರ್ಯವಂತರ
ಮಕ್ಕಳಾಗಿ
ಹುಟ್ಟುವುದು
ಅಪಾಯಕರ

ಜರ್ಮನಿಯಲ್ಲಿ
ಯುದ್ಧಪ್ರಯತ್ನ

ಕತೆ, ನಾಟಕ,
ವರ್ತಮಾನಗಳೂ ಇತ್ಯಾದಿಗಳು

ಮುಂದಿನ ವಾರದ
ಸತ್ಯವಾದಿ ವಾರಪತ್ರಿಕೆಯನ್ನು
ಓದಲು ತಪ್ಪಬೇಡಿ

ಸಿಂಹಳದ್ವೀಪದ ರಾಣಿ
(ಅಕೇರ)

ಮುನಿಸಿಪಲ್ ಕೌನ್ಸಿಲರುಗಳು ಜೀವಿ ಗುಡಿಸುತ್ತಾರೆ !

ಲಕ್ನೌದಲ್ಲಿ ಜೀವಿ ಗುಡಿಸುವವರು ಮುಸ್ಕರ ಹಿಡಿದಿರುವುದರಿಂದ ಅಲ್ಲಿಯ ಮುನಿಸಿಪಲ್ ಕೌನ್ಸಿಲರಗಳೇ ಜೀವಿ ಗುಡಿಸುತ್ತಿದ್ದಾರೆಂದು ತಿಳಿಬಂದಿದೆ !

ಸಾಮಾಜಿಕ ನಾಟಕ

ದೈವಲೀಲೆ

ಅಥವಾ ಪ್ರೇಮಪಾಶ

— ಲೇಖಕರು —

ಬಿ. ಎಸ್. ನಾಗೇಂದ್ರನ್, ಬೆಂಗಳೂರು

ಇದರ ಎಲ್ಲಾ ಹಕ್ಕುಗಳೂ ಸತ್ಯವಾದಿ ಆಫೀಸಿನಿಂದ ಕಾದಿಡಲ್ಪಟ್ಟಿದೆ.

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

ಅಂಕ ೬

(ರಾಯರ ಮನೆ ವರಾಂಡ. ರಾಯರು ಈಸೀ ಚೇರ್ ಮೇಲೆ ಕುಳಿತಿರುವರು. ರಾಮು ನೆಲವನ್ನು ಕಾಲಿನ ಹೆಬ್ಬೆರಳಿನಿಂದ ಬರೆಯುತ್ತಾ ನಿಂತಿರುವನು)

ರಾಯರು ರಾಮೂ, ನಿನ್ನೊಂದು ಮಾತು ಕೇಳಬೇಕೂಂತ ಕರೆದ, ಕೇಳಲೋ

ರಾಮು—ಆಗತ್ಯವಾಗಿ ಕೇಳಪ್ಪಾ!

ರಾಯರು—ಕೇಳೋದಕ್ಕೇನಿಲ್ಲ, ಕೋಪ ಗೀಪ ಮಾಡಿಕೊಂಡ್ರೇ?

ರಾಮು—ಕೋಪಾಯಾಕೆ? (ಅಸಡ್ಡೆಯಿಂದ) ಮದ್ವೇ ವಿಚಾರತಾನೇ?

ರಾಯರೇ—ಹೌದು! ಆ ಸುಬಣ್ಣಾ ಚಾರ್ಟರ ಮಗಳ್ನೇನಾಗಿಧಾಳೇ?

ರಾಮು—ಸಂಗೊತ್ತಿಲ್ಲನೇ? ನನಗೆ ಈಗ ಮದ್ವೇ ಬೇಡಪ್ಪಾ!

ರಾಯರು—ಸುಮ್ನೀ ಯಾಕಪ್ಪಾ, ಬೇಡಾನ್ನೋದು. ಹುಡುಗೀಲಿ ಏನಾದರೂ ಕೆಟ್ಟ ಗುಣವಿದ್ದರೆ, ಬೇಡಾನ್ನಬೇಕು. ಯೋಚನೆ ಮಾಡು.

ರಾಮು—ಯೋಚನೇನೂ ಬೇಡ. ಏನೂ ಬೇಡ. ಈಗ ಖಂಡಿತಾ ನನಗೆ ಮದ್ವೆ ಬೇಡ!

ರಾಯರು—(ವ್ಯಂಗ್ಯವಾಗಿ) ಆ ಸುಬ್ಬು ಮಗಳಾದ್ರೇ, ಮಾಡಿಕೋತೀಯೇನೋ?

ರಾಮು—(ಮೇಲೆ ನೋಡುತ್ತಾ) ನೋಡೋಣ, ಅಹಡ್ಡಿಯಾವ್ರೆ, ಪರವಾಗಿಲ್ಲ. ಹಳ್ಳಿಗಿದ್ದರೂ ಸಮ್ಮೋಳು. ಮುಖ್ಯ ನನಗೊಬ್ಬನಿಗೆ ಅನ್ನ ಹುಟ್ಟಿಸಿಕೊಂಡು ತಿನ್ನೋದಕ್ಕಿಲ್ಲಾ. ಇದು ಮಧ್ಯೆ ಅಕೌಂಪ್ಲಾಯ್ಮೆಂಟ್ ಪ್ರಾಬ್ಲಮ್ ಬೇರೆ! ಅದನ್ನ ಸಾಲ್ವ್ ಮಾಡೋಡು ಹ್ಯಾಗೇ?

ರಾಯರು—(ನಗುತ್ತಾ) ಅದಕ್ಕೆ ಇಷ್ಟು ಯೋಚನೇನೇ? ಅಲ್ಲೋ ಮಗು! ಅವಳೇ ಅಕೌಂಪ್ಲಾಯ್ಮೆಂಟ್ ಪ್ರಾಬ್ಲಮ್ ಸಾಲ್ವ್ ಮಾಡ್ಯಾಳೋ?

ರಾಮು—(ಆತುರದಿಂದ) ಅದು ಹೇಗೆ? ಸಾಮೋಶನಕ್ಕೆ ಅನ್ನಾ ಹಾಕ್ಯಾಳೋ ಅವಳು? ಇವತ್ತೋ ನಾಳೇನೋ ತಾನೇ ಡಿಸಾಲ್ವ್ ಆಗೋಹಾಗೆ ಇಧಾಳೆ. ಒಂದುಸಕ್ಕಾ ಬಡುಕಿ ಕೊಂಡರೂ ಹೆಂಗಸಿನ ಅನ್ನಾ ಬೇಡಣ್ಣಾ.

ರಾಯರು—(ಕೋಪದಿಂದ ಎದ್ದು ನಿಂತುಕೊಂಡು) ಸಾಕು ಸಾಕು ನಿಲ್ಲಿಸೋ ನಿನ್ನ ಉಪನ್ಯಾಸ. ಏನೋ ಮದ್ವೇ ಮಾಡಿಕೊಳ್ಳಿ ಅಂತ ಹೇಳಿದರೆ ಮಹಾ ತಿಳಿದವನಹಾಗೆ ದೊಡ್ಡ ಲೆಕ್ಚರ್ಗೆ ಶುರುಮಾಡಿಬಿಟ್ಟ; ಮುಚ್ಚು ಬಾಯಿ.

ರಾಮು—(ಸೆಲವನ್ನು ನೋಡುತ್ತಾ) ಲಕ್ಚರ್ ಗಿಕ್ಚರ್ ಏನೂ ಮಾಡಲಿಲ್ಲವಲ್ಲಾ?

ರಾಯರು—(ಕೋಪದಿಂದ) ಲಕ್ಚರ್ ಅಲ್ಲ! ನೀನು ಓದಿದೀ ಅಂತ ನನಗೆ ಗೊತ್ತೋ? ಹೇಳಿದ ಮಾತು ಕೇಳದಿದ್ರೆ ಏನಾಗುತ್ತೆ ಗೊತ್ತೋ? ಮುಖ್ಯ ಮಂಗಾಂತ ಬಿಟ್ಟಿ. ಇನ್ಯಾರಾದ್ರೂ ಆಗಿದ್ರೆ ಸಿಗಿದು ತೋರ್ಣಾ.....

ರಾಮು—(ಕೋಪದಿಂದ) ಸಿಗಿದು ಹಾಕೋ ಕಷ್ಟಾ ಬೇಡ; ತೋರ್ಣಾ ಕಟ್ಟೋ ತೊಂದರೇನೂ ಬೇಡ. ನಾನೇ ಹೋಗ್ತೇನೆ.

(ಹೊರಡುವನು)

ರಾಯರು—ಎಲ್ಲೀಗೋ ಹೋಗೋದು ಹುಚ್ಚುಮುಂಡೆ? ಹೊರಟೇ ಹೋದನಲ್ಲೇ? ಬೇಗ್ಬಾರೇ, ಲೇ! (ಲಕ್ಷ್ಮಮ್ಮ ಓಡಿಬರುವಳು, ರಾಯರು ಬಡ್ಡಾತ್ತಿರುವರು)

ಲಕ್ಷ್ಮಮ್ಮ—(ಘಾಬರಿಯಿಂದ) ಏನೂಂದ್ರೇ, ಯಾಕೆ ಹೀಗಾಡ್ತೀರಿ? ಏನಾಯ್ತು?

ರಾಯರು—ಏನೂ ಇಲ್ವೇ. ರಾಮು....

ಲಕ್ಷ್ಮಮ್ಮ—(ಭಯದಿಂದ) ಎಲ್ಲಿ ರಾಮು. ನಿನ್ಮತ್ತಾನೇ ಮಾತಾಡ್ತಿದ್ದಲ್ಲಾ? (ಸುತ್ತಲೂ ನೋಡುವಳು)

ರಾಯರು—ಇಲ್ಲೇ ಇದ್ದಾ! ನಾನು ಮದ್ವೇ ವಿಚಾರ ಏನೋ ಹೇಳ್ಬೇಕೂಂತ ಹೋದೆ. ಹೊರಟೇಹೋದನಲ್ಲಾ ಏನ್ಮಾಡೋಡು.

ಲಕ್ಷ್ಮಮ್ಮ—ಏನ್ಮಾಡೋದೇ? ನಾನು ಮುಂಜೇನೇ ಹೇಳಿರಲಿಲ್ವೇ? ಅವನೊಂಥರ ಹಠಮಾರಿ, ಅವನ್ಸರಿಹೋಗಿಸಿಕೊಂಡು ಇದುವರಿಗೂ ಹೇಗೋ ಹೊಗಾತ್ತಾ ಇದ್ದೆ. ಇದೆಲಾ ನನ್ನ ಪ್ರಾರಬ್ಧ ಕರ್ಮ, ನೀವೇನು ಮಾತ್ಕೀರಿ ಪಾಪ. ಗಂಡನ್ನ ನೋಡಿದರೆ ಈ ಜೆನ್ನ, ಮಗನೋ ಈ ಗತಿಯಾದ. (ಜಳಕ್ಕೆ ಹುಡುಕುವುದಕ್ಕೆ ಹೋಗುವಳು)

ರಾಯರು—(ಸ್ವ) ಇರೋ ಒಬ್ಬ ಮಗನ್ನ ಈ ಹಾಳು ದುಡ್ಡಿಗಾಗಿ ಕಳಕೊಂಡಂತಾಯಿತು. ಇಷ್ಟೆಲ್ಲಾ ಈ ಮದುವೆ ವಿಚಾರ ಎತ್ತಿದಾಗತಾನೇ ಆಗಿದ್ದು. ಅವನ್ಯಾರನ್ನು ಬೇಕಾದರೂ ಮದುವೆಯಾಗಲಿ. ನಾನು ಸತ್ರೆ ಪಿಂಡಾನಾದ್ರೂ ಹಾಕ್ತಾನೆ ನಾನೇನಾದರೂ ಈ ಹಾಳು ದುಡ್ಡ ಸಾಯೋವಾಗ ತೊಗೊಂಡು ಹೋಗ್ತೀನೇ? (ಲಕ್ಷ್ಮಮ್ಮ "ರಾಮೂ, ರಾಮೂ" ಎಂದು ಕೂಗಿಕೊಂಡು ಬರುವಳು)

ಲಕ್ಷ್ಮಮ್ಮ—ಈ ಬುದ್ಧಿ ಮೊದಲೇ ಇದ್ದಿದ್ರೆ ಇಷ್ಟು ಅನಾಹುತ ಆಗ್ತಾ ಇರ್ಲಿಲ್ಲತಲ್ಲಾ!

ರಾಯರು—ಕೆಟ್ಟಮೇಲೆತಾನೇ ಬುದ್ಧಿ ಬರೋದು?

ಲಕ್ಷ್ಮಮ್ಮ—ಅದೇನೋ ನಿಜಾಂದ್ರೆ, ಬನ್ನೀ, ರಾಮೂನ್ನಾ ನೋಡೋಣ. ಕರೆಗೋ ಭಾವಿಗೋ ಮಗಚಿಕೊಂಡರೆ ಗತಿಯೇನು?

(ಇಬ್ಬರೂ ಹೋಗುವರು: ತೆರೆ ಜಿಳ್ಳುವುದು)

[ಮುಂದುವರಿಯುವುದು.]

ಹಾಸ್ಯಲಹರಿ

ಆತ—ಈಗ ತಿಳಿಯಿತು, ಏಕೆ ಹೆಂಗಸರನ್ನ 'ಪಕ್ಷಿಗಳೆಂದು ಕರೆಯುವರೋ?

ಆಕೆ—ಏನು ಅದು, ಹೇಳಿ.

ಆತ—ಪಕ್ಷಿಗಳು ಯಾವಾಗಲೂ ಶಬ್ದ ಮಾಡುವಂತೆಯೇ ಹೆಂಗಸರಿಗೆ ತಲೆಹರಟೆ ಹೆಚ್ಚು. ಅಂತ.

× ×

ಒಬ್ಬ ದೊಡ್ಡಮನುಷ್ಯನ ವೇಷವನ್ನು ಧರಿಸಿದ್ದ ಕಳ್ಳನೊಬ್ಬನು ಅಂಟುಗಳನ್ನು ಮಾರುವ ಅಂಗಡಿಗೆ ಹೋದನು. ಹಜಾರದಲ್ಲಿ ನೆಲದ ಮೇಲೆ ರೂಪಾಯಿ ಬಿದ್ದಿದ್ದದ್ದನ್ನು ಕಂಡನು. ಸುತ್ತಮುತ್ತಲೂ ನೋಡಿದ. ಯಾರೂ ಕಾಣಿಸಲಿಲ್ಲ. ತನ್ನ ಜೋಬಿನಲ್ಲಿದ್ದ ಕರವಸ್ತ್ರವನ್ನು ಅದರ ಮೇಲೆ ಎಸೆದು ರೂಪಾಯಿಯನ್ನು ಕರವಸ್ತ್ರದೊಂದಿಗೆ ತೆಗೆದುಕೊಳ್ಳಲು ಬಗ್ಗಿದನು. ಅಷ್ಟರಲ್ಲಿ ಅಂಗಡಿಯ ಗುಮಾಸ್ತ ರೊಬ್ಬರು ಬಂದು "ಸ್ವಾಮಿ, ನಮ್ಮಲ್ಲಿ ಮಾರಾಟವಾಗುವ ಅಂಟುಗಳು ಎಷ್ಟು ಉತ್ತಮವಾದುವೆಂಬುದನ್ನು ತಾವು ಪರೀಕ್ಷಿಸಿದಿರಿ. ಆದುದರಿಂದ ನಮ್ಮ ಪದಾರ್ಥಗಳಿಗೆ ವ್ಯೋತ್ಸಾಹವನ್ನು ಕೊಡುವುದು ಮಾತ್ರವಲ್ಲದೆ, ಅವುಗಳ ಉಪಯೋಗ ವಿಷಯದಲ್ಲಿ ಪ್ರಶಂಸಾ ಪತ್ರಿಕೆಯನ್ನು ದಯಪಾಲಿಸಬೇಕು" ಎಂದನು.

ಕಳ್ಳನು ತನಗೆ ಪರಾಭವವಾದುದಕ್ಕೆ ವ್ಯಸನಗೊಂಡು ಹಿಂತಿರುಗಬೇಕಾಯಿತು.

× ×

ರಾಮು—ನೀನು ಕೇಳಿದಷ್ಟು ಹಣ ನನ್ನಲ್ಲಿಲ್ಲ. ಈಗ ಬರೀ 14 ಆಣೆ 6 ಕಾಸು ಇವೆ.

ಸೋಮು—ಅದನ್ನು ಇಲಿ ಕೊಡು. ವಿಕ್ಕಿದ್ದನ್ನು ಆ ನೇಲೆ ಕೊಡುವಂತೆ.

× ×

ಆಕೆಯು ಬಹಳ ಗಟ್ಟಿಗಳು. ಹಾಗೂ ಶಕ್ತಿವಂತಳು. ರಾತ್ರಿ ಕಳ್ಳತನ ಮಾಡಲು ಬಂದವನನ್ನು ಹಿಡಿದು, ಹೊಡೆದು ಬಿಗಿದುಕಟ್ಟಿ ಪೋಲೀಸಿಗೆ ಒಪ್ಪಿಸಿದಳು. ಕೇಸಾಯಿತು. ವಿಚಾರಣೆಯ ದಿನ ಮೇಜಿಸ್ಟ್ರೇಟರು ಆಕೆಯನ್ನು ಕುರಿತು ಏನು ಇವನನ್ನು ಇಷ್ಟು ಕ್ರೂರವಾಗಿ ಶಿಕ್ಷಿಸಿದಿರಿ ಎಂದು ಕೇಳಿದನು.

ಆಕೆ—ಏನು ಮಾಡೋದು, ನನ್ನ ಗಂಡನಿಗಾಗಿ ಒಂದು ಗಂಟೆಯಿಂದ ಕಾದು ಕಾದು ಬೇಸರವಾಗಿತ್ತು. ಅವನೇ ಎಂದು ಹೀಗೆ ಮಾಡಿದೆ, ಕಳ್ಳನೆಂದು ನನಿಗೆ ತಿಳಿಯಲಿಲ್ಲ ಆ ಕೋಪದಲ್ಲಿ.

ರೇಡಿಯೆಂಟ್ ೧೫

ಇದರ ಕಡೆಯ ತಾ|| 24–7–38 ಕ್ಕೂ, ಉತ್ತರ ಪ್ರಕಟಣೆಯ ತಾ|| 27–7–38 ಕ್ಕೂ ಮುಂದುವರಿಸಿದೆ.

ಮ್ಯಾನೇಜರ್.

ಸತ್ಯವಾದಿ

ಹಿಂದೂಸ್ಥಾನದಲ್ಲಿ ಹೊಸ ಶಕ್ತಿ ಉದಯಿಸಿದೆ.

ಪಂಡಿತ ಜವಹರ್‌ಲಾಲರು ತಮ್ಮ ಅಮೋಘ ಭಾಷಣದಿಂದ ಇಂಗ್ಲೆಂಡ್, ಫ್ರಾನ್ಸ್, ಮುಂತಾದ ಪಾಶ್ಚಾತ್ಯದೇಶಗಳನ್ನು ಬೆರಗು ಮಾಡುತ್ತಿರುವರಷ್ಟೆ ಅವರು ಮೇಲ್ಕಂಡ ವಿಚಾರವನ್ನು ಕುರಿತು, ಲಂಡನ್ ಫಿನ್ಸ್‌ಬರೀ ಟೌನ್ ಹಾಲಿನಲ್ಲಿ ನಡೆದ ಒಂದು ಬಹಿರಂಗ ಸಭೆಯಲ್ಲಿ ಒಂದು ಭಾಷಣ ಮಾಡಿದರು. ಅದರ ಸಾರಾಂಶವಿದು—

"ಹಿಂದೀ ಕ್ಕೆತರು ಜಾಗೃತರಾಗಿರುವರು. ಅವರು ತಮ್ಮ ಬಲವನ್ನು ಅರಿತುಕೊಂಡಿರುತ್ತಾರೆ. ಹಿಂದೂ ದೇಶದಲ್ಲಿ ಒಂದು ಹೊಸ ಶಕ್ತಿಯು ಉದಯಿಸಿದೆ. ಭಾರತದ ಯೋಗ್ಯತೆಯು ಇಂದು ಜನತೆಯಲ್ಲಿ ವ್ಯಕ್ತವಾಗುತ್ತಿದೆ. ಜಗತ್ತಿನ ಪ್ರಶ್ನೆಗಳ ದೃಷ್ಟಿಯಿಂದ ದೇಶದ ಪ್ರಶ್ನೆಗಳನ್ನು ಎದುರಿಸುವ ಮೂಲ ಬಲವು ಭಾರತಕ್ಕೆ ಇಂದು ಇದೆ. ಆದ್ದರಿಂದಲೇ ಇಂದು ಭಾರತಕ್ಕೆ ಈ ಪ್ರಾಧಾನ್ಯತೆ ಬರಲು ಕಾರಣ. ರಾಜಕೀಯ ರಂಗದಲ್ಲಿ ಬಲಯುತವಾದ ರಾಷ್ಟ್ರಗಳನ್ನು ಹೊಗಳುತ್ತಾರೆ. ಅಂತೆಯೇ ಹಿಂದೂಸ್ಥಾನವೂ ಇಂದು ಒಂದು ಶಕ್ತಿವಂತ ರಾಷ್ಟ್ರವೆಂಬುದನ್ನು ಯಾರೂ ಮರೆಯಬಾರದು. ಫೆಡರೇಷನ್ನಿನ ವಿಚಾರದಲ್ಲಿ ಅದಕ್ಕೆ ನನ್ನ ಹೃದಯಲ್ಲಿ ಕೊಂಚ ಸ್ಥಳ ಮಾತ್ರ ಇದೆ. ಹಿಂದೂಸ್ಥಾನವು ಇಂದು ಎಲ್ಲಾ ಪ್ರಶ್ನೆಗಳನ್ನೂ ಸ್ವಾತಂತ್ರ್ಯ ದೃಷ್ಟಿಯಿಂದಲೇ ನೋಡುತ್ತಿದೆ. ನಮಗೆ ಈಗ ಬೇಕಾದ ದ್ದಾದರೂ ಸಂಪೂರ್ಣ ಸ್ವಾತಂತ್ರ್ಯವೇ ಆಗಿದೆ".

ನಾಳೆಯ ದಿವಸ ಟೌನ್‌ಹಾಲಿನಲ್ಲಿ ಆಳಿದ ಮಹಾಸ್ವಾಮಿಯವರಾದ ಶ್ರೀ ಮುಮ್ಮಡಿ ಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರ್ ರವರ ಜಯಂತಿ ಮಹೋತ್ಸವವು ನಡೆಸಲ್ಪಡುವುದು. ಮಾ. ಮೈಸೂರು ಡೆಪ್ಯೂಟೇಷನರ್ ಮಿ || ಮೇಕ್ರಿ ಸಾಹೇಬರು ಅಗ್ರಾಸನವನ್ನು ವಹಿಸುವರು ಎಂದು ತಿಳಿಯಬಂದಿದೆ.

ಜರ್ಮನಿಯಲ್ಲಿ ಯುದ್ಧ ಪ್ರಯತ್ನ

"ರೌಂಡುಟೇಬಲ್" ಪತ್ರಿಕೆಯು ಹೀಗೆ ತಿಳಿಸುತ್ತದೆ—

ಇಂದು ಜರ್ಮನಿಯು ಎಲ್ಲಾ ದೇಶಗಳಿಗಿಂತಲೂ ಯುದ್ಧಕ್ಕೆ ಹೆಚ್ಚು ಸಿದ್ಧವಾಗಿದೆ. ಜರ್ಮನಿಯಲ್ಲಿ ಹಿಟ್ಲರನೆ ಮಾತನ್ನು ಪಾಲಿಸುವರೇ ಇರುವದರಿಂದಲೂ ಹಿಟ್ಲರನು ಸೂಕ್ಷ್ಮ ಬುದ್ಧಿಯಿಂದ ವ್ಯವಹರಿಸುವದರಿಂದಲೂ, ಇತರ ದೇಶಗಳು ಜರ್ಮನಿಯನ್ನು ಎದುರಿಸಲಾರದ ಸ್ಥಿತಿಯಲ್ಲಿ ಹಿಟ್ಲರು ಇರಿಸಿರುವದರಿಂದಲೂ ಜರ್ಮನಿಯು ಇಂದು ಅತ್ಯುನ್ನತ ಸ್ಥಿತಿಗೆ ತರಲ್ಪಟ್ಟಿರುವದೆಂದು ಅರಿಯಬಹುದು. ಇಂಗ್ಲೆಂಡು, ಫ್ರಾಂನು ಈ ಎರಡು ದೇಶಗಳಿಗಿಂತ ಜರ್ಮನಿಯು ಜನ್ನಾಗಿ ವಿಮಾನ ಯುದ್ಧ ಮಾಡಲು ಸಿದ್ಧವಾಗಿದೆ. ಇಂದು ಯುದ್ಧವು ಆರಂಭವಾದಲ್ಲಿ ದಿನಂಪ್ರತಿ 25 ಸಾವಿರ ಮಂದಿಯನ್ನು ಹತಮಾಡಲು ಜರ್ಮನಿಯ ವಿಮಾನಗಳಿಗೆ ಸಾಲಭ್ಯವಾಗಿರುತ್ತದೆ. ಜರ್ಮನಿಗೆ ಪೆಟ್ರೋಲಿಗೆ ಬಹಳ ಕಷ್ಟವಾಗಿದೆ. ಪೆಟ್ರೋಲು ಒಂದು ದೊರೆತಲ್ಲಿ ಯೂರೋಪುಖಂಡದ ದೇಶಗಳಲ್ಲಿ ಅಗ್ರಸ್ಥಾನವನ್ನು ವಹಿಸಲು ಕೂಡಲೆಯುದ್ಧಕ್ಕೆ ಸಿದ್ಧವಾಗುವದು ಖಂಡಿತ. ಈ ವಿಷಯಗಳನ್ನೆಲ್ಲಾ ಪರ್ಯಾಲೋಚಿಸಿ ಇಂಗ್ಲೆಂಡು ಫ್ರಾನ್ಸು, ರಷ್ಯಗಳು ಮುಂಜಾಗ್ರತೆಯಲ್ಲಿರುವದು ಯೋಗ್ಯವಾಗಿರುತ್ತದೆ.

ಐಶ್ವರ್ಯವಂತರ ಮಕ್ಕಳಾಗಿ ಹುಟ್ಟುವುದು ಅಪಾಯಕರ

ಐಶ್ವರ್ಯವಂತರ ಹೊಟ್ಟೆಲಿ ಹುಟ್ಟಿದ್ದರೆ ಪುಣ್ಯವಂತ ಅಂತ ಎಲ್ಲ ಆಡಿಕೊಳ್ಳುತ್ತಿರುವುದನ್ನು ನೀವು ಕೇಳಿರಬೇಕು. ನೀವೂ ಅಂದುಕೊಂಡಿದ್ದೀರೇನೋ. ಆದರೆ ನೋಡಿ—ಐಶ್ವರ್ಯವಂತರ ಮಕ್ಕಳಾಗಿ ಹುಟ್ಟುವುದು ಅಪಾಯಕರವಂತೆ, ನಂಗಳ ದೌರ್ಬಲ್ಯ, ಮನೋಚಾಂಚಲ್ಯ, ಹೃದಯರೋಗ ಮುಂತಾದ ಶರೀರ ವಿಕಾರಗಳಿಗೆ ತುತ್ತಾಗುತ್ತಾರಂತೆ—ಹೀಗೆಂದು ಲಂಡನ್ ಆಸ್ಪತ್ರೆಯ ಪರಿಶೋಧಕರಾದ ಮಿ || ಲಿಂಡಸೇ ನೂಸ್ಬೇಟರ್ ಎಂಬುವರು ಅಭಿಪ್ರಾಯಪಡುತ್ತಾರೆ.

ದರೋಡೆಗಾರರ ಜೊತೆಯಲ್ಲಿ

ಡಾಕ್ಟರ್, ಲಾಯರ್ ಇತ್ಯಾದಿ

ಲಾಹೋರಿನಲ್ಲಿ ಒಂದು ದರೋಡೆಗಾರರ ಗುಂಪು ಪತ್ತೆಯಾಗಿದೆ. ಇವರಲ್ಲಿ ಅನೇಕ ಪ್ರಸಿದ್ಧ ಲಾಯರುಗಳೂ, ಡಾಕ್ಟರುಗಳೂ, ಕೋರ್ಟು ಗುಮಾಸ್ತೆಗಳೂ, ದಳ್ಳಾಳಿಗಳೂ ಸೇರಿರುವರಂತೆ. ಡಾಕ್ಟರ್‌ಗಳು ವ್ಯಾಧಿಗ್ರಸ್ಥರಾದ ಮನೆಯಲ್ಲಿ ಹಣ ಇಟ್ಟಿರುವ ಜಾಗ ತಿಳಿಸುವುದು, ಬಾಕಿಯವರು ಮುಂದಿನ ಕೆಲಸ ಮಾಡುವುದು. ಈಗ ಕೆಲವರು ಸಿಕ್ಕಿಬಿದ್ದಿದ್ದಾರೆ.

ಆಗ ಸೌಂದರ್ಯದ ರಾಣಿ ಈಗ ಭಿಕ್ಷುಕ ಹೆಂಗಸಾಗಿ ಸತ್ತಳು

ವಾಕ್ಸಾದಲ್ಲಿ ಬಂದು ರಸ್ತೆಯಲ್ಲಿ ಸ್ತ್ರೀ ಹೆಣವು ದೊರೆಯಿತು. ಸಾಯುವಾಗ ಭಿಕ್ಷುಕಳಾಗಿ ಸತ್ತಿರುವಳು. ಇವಳ ಪೂರ್ವ ಚರಿತ್ರೆಯನ್ನು ಪೋಲೀಸಿನವರು ಪತ್ತೆಮಾಡಲು—50 ವರ್ಷದಿಂದ ಈಕೆಯು ಸೌಂದರ್ಯ ರಾಣಿಯಾಗಿದ್ದಳು; ತನ್ನ ಸೌಂದರ್ಯದ ಹೊಳಪು ಪ್ರಕಾಶವಾದಮೇಲೆ, ತನ್ನ ತಂದೆತಾಯಿಗಳ ಇಚ್ಛೆಗೆ ವಿರುದ್ಧವಾಗಿ ಒಬ್ಬ ಐಶ್ವರ್ಯವಂತನಾದ ರಷ್ಯಾ ನೌಕರನನ್ನು ಮದುವೆಯಾಗಿದ್ದಳೆಂದೂ ಹೊರಪಟ್ಟಿತು. ದೈವಲೀಲೆ? ಯಾರ್ಯಾರ ಜೀವನವು ಹೇಗೇಗೆ ನಡೆಯುತ್ತಿರಬೇಕೋ ಆದು ವಿಧಿನಿಯಾಮಕವೇ ಸರಿ!

ಪ್ರೇಮ ಭಂಗದ ಪರಿಣಾಮ

ಜಪಾನಿನಲ್ಲಿ ಒಬ್ಬನು ಒಂದು ಹುಡುಗಿಯನ್ನು ತಾನಾಗಿ ಪ್ರೀತಿಸುತ್ತಿದ್ದನು. ತನ್ನನ್ನು ಮದುನೆಯಾಗೆಂದು ಕೇಳಿದನು, ಆದಕ್ಕೆ ಆಕೆಯು ತಿರಸ್ಕರಿಸಿದಳು. ಬುದ್ಧಿ ಕೆಟ್ಟುಹೋಯಿತು. ಒಂದೂಕದ ಅಂಗಡಿಗೆ ನುಗ್ಗಿ ಒಂದು ರಿವಾಲ್ವರ್ ತಂದು ದಾರಿಯಲ್ಲಿ ಹೋದವರ ಮೇಲೆಲ್ಲಾ ಗುಂಡಿನ ಮಳೆ ಸುರಿಸಿದನು, 28 ಜನರು ಹಿಂಸೆಗೆ ತುತ್ತಾದರು. ಕಡೆಗೆ ಅವನನ್ನು ಹಿಡಿದರು.

ಒಂದೇ ದಿನ ಇಬ್ಬರು ಗಂಡಂದಿರೊಡನೆ ವಿವಾಹ

ಫ್ರೆಂಚ್ ವಿಲಾಸವತಿಯೊಬ್ಬ ಪ್ರೇಮದ ಬೇಟಿ ನೋಡಿ! ಈಕೆ ಹೆಸರು ಫೋಯೆ ಎಂದು. ವಯಸ್ಸು 22. ಇವಳಿಗೆ ಇಬ್ಬರು ಪ್ರೇಮ ಮೂರ್ತಿಗಳು—ಜಾಕೆ ಮತ್ತು ಹೆನ್ರಿ ಎಂದು. ಇವಳಿಗೆ ಇಬ್ಬರಲ್ಲೂ ಒಂದೇ ಸಮನಾದ ಪ್ರೇಮ. ಹೀಗಿರುವಲ್ಲಿ ಜಾಕೆ ಎಂಬಾತನು ಈಕೆಯನ್ನು ತನ್ನನ್ನು ವರಿಸುವಂತೆ ಪ್ರೇರೇಪಿಸಿದನು. ಕೂಡಲೇ ಇವಳು ಒಪ್ಪಿ, ಇಬ್ಬರೂ ಒಂದು ಚರ್ಚಿಗೆ ಹೋಗಿ ಮದುವೆಯಾದರು. ಅನಂತರ ಇವಳು ತನ್ನ ಮನೆಗೆ ತೆರಳಿದಳು. ತಾಯಿಗೆ ಏನೂ ತಿಳಿಸಲಿಲ್ಲ. ಮದುವೆಯಾದ ಮೂರು ಗಂಟೆಗೆ ಇವಳ ಇನ್ನೊಬ್ಬ ಪ್ರೇಮಿಯಾದ ಹೆನ್ರಿಬಂದು ತನ್ನನ್ನು ಆಗಲೇ ಮದುವೆಯಾಗೆಂದು ಹೇಳಿದನು, ಇವಳು ಒಪ್ಪಿ ತಮ್ಮ ಮದುವೆ ರಿಜಿಸ್ಟರು ಮಾಡಿಸಿದರು. ನಿಜಕ್ಕೆವು ಹೊರಪಟ್ಟಿತು, ಇಬ್ಬರು ಗಂಡಂದಿರನ್ನು ಮದುವೆಯಾದ್ದಕ್ಕೆ ಮೊಕದ್ದಮೆಯಾಯಿತು. ಜಡ್ಜಿ ಸ್ವಲ್ಪ ದಯಾವಂತೆ. ಇಬ್ಬರ ಮದುವೆಯನ್ನು ರದ್ದುಪಡಿಸಿ, ಯಾರನ್ನು ಖಂಡಿತ ವರಿಸಬೇಕೆಂಬುದು ಇವಳು ನಿರ್ಧರಿಸುವತನಕ ಕಾರ್ಯವೆಂಟಿಗೆ ಕಳುಹಿಸಿದನು.

ವರ್ತಮಾನಗಳು

ಆಗ್ರ ಜಿಲ್ಲೆಯ ಒಬ್ಬ 40 ವರ್ಷದ ಬ್ರಾಹ್ಮಣನು, ಒಬ್ಬ 16 ತಿಂಗಳಿನ ಹುಡುಗಿಯು ಸಾಕುವ ತಂದೆಗೆ 700 ರೂಪಾಯಿ ಕೊಟ್ಟು ಆವಳನ್ನು ವರಿಸಿದನಂತೆ! ಆವಳ ತಂದೆತಾಯಿಗಳು ಆಗಲೇ ಮೃತರಾಗಿದ್ದಾರೆ. ಈ ವಿಚಾರಗಳನ್ನು ತಿಳಿದ ಕೆಲವರು ಅಲ್ಲಿನ ಅಧಿಕಾರಿಗಳಿಗೆ ಈ ವಿವಾಹವು ನಿಲ್ಲಿಸಲ್ಪಡಬೇಕೆಂದು ಬಿನ್ನವಿಸಿಕೊಂಡಿದ್ದಾರೆ.

ಹಿಂದಿ ವಿರೋಧ ಚಳವಳಿಯಲ್ಲಿ ಭಾಗವಹಿಸಿ ಮಾನ್ಯ ಮಂತ್ರಿವರ್ಯರ ಮನೆಯ ಮುಂದೆ 'ಪಿಕೇಟಿಂಗ್' ನಡೆಸಿದ 4 ಜನರನ್ನು ಮದರಾಸಿನ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರು 4 ತಿಂಗಳು ಕಠಿಣಶಿಕ್ಷೆಗೆ ಗುರಿಪಡಿಸಿದ್ದಾರೆ. ಇತರ 3 ಮಂದಿ, ಕೆಲವು ದಿನಗಳ ಹಿಂದೆ 3 ತಿಂಗಳ ಕಠಿಣ ಶಿಕ್ಷೆಗೆ ಗುರಿಪಡಿಸಲ್ಪಟ್ಟಿದ್ದಾರೆ ಅಂತೂ 7 ಮಂದಿ. ಇನ್ನೂ ಕೈದುಗಳಾಗುತ್ತಿವೆ.

ಶ್ರೀಮತಿ ನಲಿನೀ ಬಿಲದೇವಿ ಎಂಬಾಕೆ, ಮೂರು ಪೈಗೆ ಕಲ್ಕತ್ತೆಯಲ್ಲಿ ದಾನೆ ಹೂಡಿ ಡಿಕ್ರಿ ಹೊಂದಿದ್ದಾಳೆ. ಕಳೆದ ಅಕ್ಟೋಬರ್ ತಿಂಗಳಲ್ಲಿ ಆಕೆಗೆ ಬಡ್ಡಿ ರೂಪದಲ್ಲಿ ಬರಬೇಕಾಗಿದ್ದ ಮೂರು ಪೈಗೆ ಈ ದಾವೆ. ಪ್ರತಿವಾದಿಯ ಕಡೆ ವಕೀಲರು ಬಹಳವಾಗಿ ವಾದಿಸಿದರೂ, ಕಲ್ಕತ್ತಾ ಸ್ಮಾಕ್ ಕಾಸ್ ಕೋರ್ಟು ನ್ಯಾಯಾಧೀಶರಾದ ಮಾನ್ಯ ಎಂ ರಹಮಾನರು ಖರ್ಚು ಸಹಿತ ಮೂರು ಪೈಗೆ ತೀರ್ಪು ಕೊಟ್ಟೇಬಿಟ್ಟರು.

ಪಂಡಿತ ಸಹರೂಯವರನ್ನು ಕಾಮನ್ವೆಲ್ತ್ ಮಂದಿರದಲ್ಲಿ ಉತ್ಸಾಹಪೂರ್ವಕವಾಗಿ ಸ್ವಾಗತೀಕರಿಸಲ್ಪಟ್ಟರು ಇಂಡಿಯದ ಸಮಸ್ಯೆಗಳೂ ಜಗತ್ತಿನ ವಿದ್ಯಮಾನಗಳ ಭಾಗವೇ. ವಿದೇಶದ ಕಾರ್ಯಭಾರಗಳ ಸಂಭವಗಳ ಪರಿಣಾಮವೂ ಇಂಡಿಯದ ಮೇಲೆ ಆಗಿಯೇ ಆಗುತ್ತಿದೆ. ಎರಡೂವರೆ ವರ್ಷಗಳ ಹಿಂದೆ ಇಂಡಿಯದ ಸಮಸ್ಯೆಯನ್ನು ಪರಿಹರಿಸಲಾಗಿದೆ ಎಂದು ಇಂಗ್ಲೆಂಡಿನವರು ಸಂಬಿರಬಹುದು. ಅದು ಒರೇ ತಪ್ಪು ಗ್ರಹಿಕೆ. ಇಂದು ಇಂಡಿಯದ ಪ್ರಶ್ನೆ, ಹಿಂದಿನ ಯಾವ ಸಮಯಕ್ಕಿಂತಲೂ ದೊಡ್ಡದಾಗಿಯೇ ನಿಂತಿದೆ. ಬದಲಾವಣೆಯಾಗಬೇಕೆಂಬ ಬಯಕೆ ಪ್ರಬಲವಾಗಿದೆ. ತತ್ವದ ವೇರೆಗೆ ಫೆಡರೇಶನ್ ನಮಗೆ ಬೇಡವೆಂದಿಲ್ಲ. ಸರಕಾರವು ತಯಾರಿಸಿಟ್ಟ ಆ ಫೆಡರೇಶನಿನ ಯೋಜನೆಗೆ ಮಾತ್ರ ತಮ್ಮದು ವಿರೋಧ ಎಂದು ಅವರು ನುಡಿದರು.

ಪಾಟ್ನಾದಲ್ಲಿ ಒಬ್ಬ ಬಡ ಹೆಂಗಸು ಸತ್ತಳೆಂದು ಆಕೆಯನ್ನು ಚಿತೆಯ ಮೇಲಿರಿಸಿ, ಕೊಂಚ ಬಿಸಿ ತಗಲಿಸಿ ಬಳಿಕ ಗಂಗಾಜಲಕ್ಕೆ ಬಿಸಾಡಿದರೆಂದೂ ಆ ಶರೀರ ಕೊಂಚ ದೂರ ಗಂಗಾ ಪ್ರವಾಹದಲ್ಲಿ ತೇಲಿ ಹೋದ ಮೇಲೆ ತೆರೆಗಳು ಆಕೆಯನ್ನು ತೀರಕ್ಕೇ ಹಿಂದೆ ತಂದು ಬಿಸಾಡಿದುವು ಎಂದೂ ಆಗ ಆಕೆಯಲ್ಲಿ ಜೀವ ಕಳೆ ಉಂಟಾಗಿತೆಂದೂ ವರ್ತಮಾನವಿದೆ.

ಬಾಗ್ದಾಡಿನ ನ್ಯಾಯಶಾಸ್ತ್ರ ಕಾಲೇಜಿನಲ್ಲಿ ಓದುತ್ತಿದ್ದ ವಿದ್ಯಾರ್ಥಿಗಳ ಪೈಕಿ ಹೆಚ್ಚು ಮಂದಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಲಿಲ್ಲ. ಅದಕ್ಕಾಗಿ ಒಬ್ಬ ವಿದ್ಯಾರ್ಥಿಯು ಮುಖ್ಯೋಪಾಧ್ಯಾಯನನ್ನು ಗುಂಡು ಹೊಡೆದು ಕೊಂದು ನಂತರ ತಾನೂ ಆತ್ಮಹತ್ಯದೂಡಿಕೊಂಡನು.

ಲಂಡನ್ನಿನಲ್ಲಿ ಇಷ್ಟು ದಿನ ಗರ್ಭನಿರೋಧವು ಫ್ಯಾಷ್ಷ ಆಗಿತ್ತು. ಆದರೆ ಈಗ ಮತ್ತೊಮ್ಮೆ, ಸ್ತ್ರೀಯ ಗರ್ಭವತಿಯರಾಗಿ ಮಕ್ಕಳನ್ನು ಹೆರುವುದೇ ಫ್ಯಾಷ್ಷ ಆಗಿ ಪರಿಣಮಿಸುತ್ತಿದೆ. ಈ ವರ್ಷದ ಮೊದಲನೆ ಮೂರು ತಿಂಗಳಲ್ಲಿ 155000 ಮಕ್ಕಳು ಅಲ್ಲಿ ಹುಟ್ಟಿವೆ.

ಹಿಂದೂದೇಶವು ಔಷಧಿಗಳ ಮಾತೃಸ್ಥಾನವು. ಎಷ್ಟೋ ಧೃತಿಗಳನ್ನೂ ರಸಾಯನಗಳನ್ನೂ ಔಷಧಿಗಳನ್ನೂ ಇವುಗಳಿಂದ ತಯಾರಿಸಬಹುದು. ಶ್ರೀ ಭೋಪ್ಪಾರವರ ಉಪದೇಶದಂತೆ ನಡೆದಲ್ಲಿ ಇಂಡಿಯಾದಿಂದ ಪ್ರತಿ ಸಾಲಿನಲ್ಲಿಯೂ ವಿದೇಶಗಳಿಗೆ ಔಷಧಿಗಳಿಗಾಗಿ ಹೋಗುವ ಕೋಟ್ಯಾಂತರ ರೂಪಾಯಿಗಳನ್ನು ಉಳಿಸಿಕೊಳ್ಳಬಹುದು.

ಕ್ಯಾಥೊಲಿಕ್ ಕ್ರೈಸ್ತರು ಯಾರೂ ಸೋಷಿಯಲಿಸ್ಟರಾಗಿರಲು ಸಾಧ್ಯವಿಲ್ಲವೆಂದು ಪೋಪರವರು ಪ್ರಕಟಿಸಿರುವರಾದುದರಿಂದ ಸೋಷಿಯಲಿಜಂ ವರ್ಧಿಷ್ಣುವಿರುವ ದೇಶಗಳಲ್ಲಿ ಕ್ರೈಸ್ತರ ಸ್ಥಿತಿ ದುರ್ಭರವಾಗಿರುವದೆಂದು ಊಹಿಸಲಾಗಿದೆ.

ತನ್ನ ಪತ್ನಿಯು ಆಗಿಂದಾಗ್ಗೆ ಆಹಾರದೊಂದಿಗೆ ಆಲೂಗೆಡ್ಡೆಯನ್ನು ಉಪಯೋಗಿಸುವುದರಿಂದ ತನಗೆ ಅಜೀರ್ಣ ವ್ಯಾಧಿಯು ಪ್ರಾಪ್ತವಾದುದರಿಂದ ತನ್ನ ಹೆಂಡತಿಯೊಂದಿಗೆ ಸಂಸಾರ ಮಾಡಲಾಗುವುದಿಲ್ಲವೆಂದು ಜಾರ್ಜ್ ಡಡ್ಲಿ ಎಂಬಾತನು ಕೆನಕ್ಟಿಕಟ್ ಕೋರ್ಟಿನಲ್ಲಿ ದಾವಾ ಮಾಡಿರುವನು.

ಕಾರ್ಟಿಟೆರಿಯಾ ಪ್ರಾಂತ್ಯದಲ್ಲಿ ಕಂಡು ಹಿಡಿಯಲ್ಪಟ್ಟಿರುವ ಕ್ರೂಟ್ ದ್ವೀಪದ ಮುಖ್ಯ ಪಟ್ಟಣದ ಜನಸಂಖ್ಯೆ 17 ಮಂದಿ. ಇಂಗ್ಲೆಂಡ್ ಆಸ್ಟ್ರೇಲಿಯಾಗಳ ನಡುವೆ ಹಾರುವ ವಿಮಾನಗಳು ಈ ದ್ವೀಪದಲ್ಲಿ ನಿಂತು ನಂತರ ಹೋಗುವುವು.

ದೆಹಲೀ ಪ್ರೊಫೆಸರ್ ಸೈಯದ್ ಮಹಮದ್ ಎಂಬಾತನು. ಹತ್ತು ವರ್ಷದ ಹುಡುಗಿಯನ್ನು ಬಹಳವಾಗಿ ಹೊಡೆದದ್ದಕ್ಕಾಗಿ ಆತನ ಮೇಲೆ ಕ್ರಿಮಿನಲ್ ಕೇಸ್ ಮಾಡಲಾಗಿತ್ತು. ಪ್ರೊಫೆಸರನ್ನು ಜಾಮೀನಿನ ಮೇಲೆ ಬಿಟ್ಟಿದಾರೆ.

ಇಂಗ್ಲೆಂಡಿನಲ್ಲಿ ಕೆಲವರು ಇಲಿಗಳನ್ನು ಕೊಲ್ಲಲು ಪ್ರಾರಂಭಿಸಿದಾರೆ. ಇದನ್ನು ಬೇಟೆಯಾಡುವುದರಲ್ಲಿ ಬ್ರಿಟಿಷ್ ಯುವಕರು ಬಹಳ ಹೆಚ್ಚು ಉತ್ಸಾಹವನ್ನು ತೋರಿಸುತ್ತಿದ್ದಾರೆ.

ಲಖನೌವಿನ ಓರ್ವ ಸಿಕ್ಖ ತರುಣಿಯು ನಿದ್ರಿಸುತ್ತಿದ್ದಾಗ ಗುಡುಗಿನ ಭೀಕರ ಧ್ವನಿಯನ್ನು ಕೇಳಿ ಭಯಪಟ್ಟಳು. ಭಯದಿಂದಲೇ ಬುದ್ಧೀ ಸ್ವಾಧೀನತೆಯು ತಪ್ಪಿಹೋಗಿ ತನ್ನ ಉತ್ತಮ ಉಡುಪುಗಳನ್ನು ಧರಿಸಿ ಆಭರಣಗಳನ್ನು ಇಟ್ಟುಕೊಂಡು ಮನೆಯಿಂದ ನಡುರಾತ್ರೆಯಲ್ಲಿ ಹೊರಟು ಹೋದಳು. ರಸ್ತೆಯ ಸಮೀಪದ ಒಂದು ನಾಲೆಗೆ ಕಾಲು ಜಾರಿಬಿದ್ದು ಸತ್ತು ಹೋದಳು.

ಮುಂಬಯಿ ಸರಕಾರದವರು ವಿಜಾಪುರ ಜೈಲನ್ನು ಮುಚ್ಚಲು ನಿರ್ಧರಿಸಿದ್ದಾರೆ. ಸತ್ಯಾಗ್ರಹ ಕಾಲದಲ್ಲಿ ಈ ಜೈಲಿನಲ್ಲಿ ಸಾವಿರಾರು ಮಂದಿ ಕಾಂಗ್ರೆಸ್ ಸೇವಕರು ಬಂಧಿಸಲ್ಪಟ್ಟಿದ್ದರು. ಈ ಜೈಲನ್ನು ಮುಚ್ಚುವುದರಿಂದ ಸರಕಾರಕ್ಕೆ ೧ ಲಕ್ಷ ರೂ. ಉಳಿಯುವುದು.

ತುರ್ಕಿಯ ಸರಕಾರದವರು ಹೊಸಶಾಸನವೊಂದನ್ನು ಹೊರಡಿಸಿರುವರು. ಇದಕ್ಕನುಸಾರವಾಗಿ ಹಿಂದೆ ಎಂದರೆ ೧೯೨೩ ರಲ್ಲಿ ತುರ್ಕಿಯಿಂದ ಪರದೇಶಗಳಿಗೆ ಪಲಾಯನ ಮಾಡಿದವರು ಪುನಃ ತುರ್ಕಿಗೆ ಬರಬಹುದು.

ಜಗತ್ತಿನ ಇತಿಹಾಸದಲ್ಲೇ ನಡೆಯದಂತಹ ವಿವಾಹವೊಂದು, ವಿಯನ್ನಾ ನಗರದ ಡೊಮಿನಿಕನ್ ಇಗರ್ಜಿಯಲ್ಲಿ, ನಡೆಯಿತು. ಸೆರೆಹಿಡಿಯಲ್ಪಟ್ಟು ಹಾಗೂ ಆತನೆಲ್ಲಿರುವನೆಂದೇ ತಿಳಿಯದ ಕುರ್ತ್‌ವಾನ್ ಶೂಶ್ನಿಗ್ (ಆಸ್ಟ್ರಿಯದ ಮಾಜಿ ಚಾನ್ಸಲರ್) ನನ್ನು ಕೌಂಟಿಸ್ ವೇರಾಫುಗ್ಗರ್ ವಾನ್ ಬಾಬೆನ್ ಹೋಸೆನ್ ಎಂಬಾಕೆ ವಿವಾಹವಾದಳು. ವಿವಾಹಕ್ಕೆ ಸಾಕ್ಷಿಗಳು, ಹುಡುಗನ ಅಣ್ಣ ಮತ್ತು ಹುಡುಗಿಯ ಅಣ್ಣ. ಗಂಡನೂ, ಅವನ ಬದಲಿಗೆ ಇತರ ಯಾರೂ ಅಲ್ಲಿ ಆಗ ಹಾಜರು ಇಲ್ಲದೆ, ಆತನಿರುವಿಕೆಯ ಸಂಬಂಧತೆಯೇ ತಿಳಿದು, ಹುಡುಗಿ, ಆತನ ಹೆಸರನ್ನು ಹೇಳಿ, ಆತನ ಚಿತ್ರವನ್ನು ನೆನೆದು ವಿವಾಹವಾದಳು. ವಿವಾಹದ ಅನಂತರದಲ್ಲಿ, ವರನ ಪತ್ರವೊಂದನ್ನು ವಧುವಿಗೆ ಒಪ್ಪಿಸಲಾಯಿತು. ಅದರಲ್ಲಿ 'ಈಗ ನಾವು ಗಂಡಹೆಂಡಿರು. ಇದರಿಂದ ನನಗೆ ಬಹಳ ಸಂತೋಷವಾಗುತ್ತದೆ. ನನ್ನ ಸಹಸ್ರಾರು ಚುಂಬನಗಳು ; 'ಕುರ್ತ್' ಎಂದು ಬರೆದಿತ್ತು.

ಉತ್ತರ ಅಟ್ಲಾಂಟಿಕ್ ಮಹಾ ಸಮುದ್ರದಲ್ಲಿ ಬರ್ಮುಡಾಸ್ ದ್ವೀಪದಲ್ಲಿ ಸಿಹಿನೀರು ಸಿಗುವದಿಲ್ಲವಾದುದರಿಂದ ನ್ಯೂಯಾರ್ಕಿನಿಂದ ಹಡಗಿನಲ್ಲಿ ದಿನಂಪ್ರತಿ ಸಿಹಿನೀರು ಹೋಗುತ್ತಿದೆ

ಕೀಲುನಗರದ ಸಮೀಪದಲ್ಲಿ ಬೀದಿಯಲ್ಲಿ ಸತ್ತು ಬಿದ್ದಿದ್ದ ಹಂದಿಯುರಿಯ ಕೊರಳಿಗೆ ಕಟ್ಟಿದ್ದ ಚೀಟಿಯನ್ನು ಓದಿ ನೋಡಲು ಸರ್ಕಾರದವರ 4 ವರ್ಷಗಳ ಕಾರ್ಯಕ್ರಮದಿಂದ ಅದು ಸತ್ತಿರುವಂತೆ ಬರೆಯಲ್ಪಟ್ಟಿತ್ತು. ಪ್ರಜೆಗಳು ಬಹಿರಂಗವಾಗಿ ಸರ್ಕಾರವನ್ನು ಆಕ್ಷೇಪಿಸಲು ರಷ್ಯಾದಲ್ಲಿ ಅವಕಾಶವಿಲ್ಲವೆಂದು ಇದರಿಂದ ಊಹಿಸಬಹುದು.

— ಐತಿಹಾಸಿಕ ಕತೆ —

ಈಶರನಲ್ಲಿ ವಿಶ್ವಾಸ

ಲೇಖಕರು—ಜಿ. ಆರ್. ಮಹಾಬಲಭಟ್ಟ,
ವೇದಾಂತಶಿರೋಮಣಿ ವೇದಾಂತವಿಶಾರದ,
ದ್ವಾರಕಾ ಸಂಸ್ಥಾನ, ಮುಳುಬಾಗಿಲು ಮಠ.

ಉಧಈಯ ರಾಜನಾದ ಮಾಹಿಲನಿಗೆ ಮೂರು ಜನ ಸೋದರಿಯರಿದ್ದರು. ಒಂದು ದಿನ ರಾಜನು ಆ ಮೂವರನ್ನು ಪ್ರಶ್ನಿಸಿದನು—"ನೀವು ಯಾರ ಅನುಗ್ರಹದಿಂದ ಊಟಮಾಡುವಿರಿ?" ಎಂದ. ದೊಡ್ಡವಳೂ, ಮಧ್ಯದವಳೂ ಹೇಳಿದರು—"ತಮ್ಮ ಅನುಗ್ರಹ". ಆದರೆ ಚಿಕ್ಕವಳು ಉತ್ತರಿಸಿತ್ತಳು—"ನಾನು ತಮ್ಮ ಅನುಗ್ರಹದಿಂದ ಊಟಮಾಡುತ್ತಿರುವುದು ನಿಜ; ಆದರೆ ಈಶ್ವರನ ಅನುಗ್ರಹವಿಲ್ಲದೆ ಯಾರೂ ಯಾರಿಗೂ ಊಟಹಾಕಲಾರರು"

ಮಾಹಿಲನು ಸಿಟ್ಟಿನಿಂದ ನುಡಿದನು—"ನೋಡುವೆನು ನಾನು ನಿನ್ನ ಈಶ್ವರನನ್ನು". ಮಾಹಿಲನು ತನ್ನ ಅಗಮಾ ಎಂಬ ಹಿರೇ ಸೋದರಿಯನ್ನು ಮಹಾರಾಜ ಪೃಥ್ವೀ ರಾಜನಿಗೆ ಕೊಟ್ಟು ವಿವಾಹಮಾಡಿದನು. ಮಧ್ಯದ ಸೋದರಿಯನ್ನು ಕನೂಜದ ರಾಜನಾದ ಜಯಚಂದ್ರನಿಗೆ ಕೊಟ್ಟನು. ಮಲನಾ ಎಂಬ ಕಿರಿಯ ತಂಗಿಯನ್ನು ಒಬ್ಬ ಬಡ ಮುದುಕನಾದ ರೈತನಿಗೆ ಕೊಟ್ಟು ವಿವಾಹಮಾಡಿದನು.

ಎಲ್ಲಿ ಈಗ "ಮಹೋಬಾ" ಇರುವುದೋ, ಅಲ್ಲಿ ಆಗ ಮೂರು ನಾಲ್ಕು ಗುಡಿಸಲುಗಳು ಮಾತ್ರ ಇದ್ದವು. ಒಂದು ಗುಡಿಸಲಿನಲ್ಲಿ ಪರಮಾಲನೆಂಬ ಠಾಕೂರನು ವಾಸ ಮಾಡುತ್ತಿದ್ದನು. ಆತನಿಗೆ ಅಲ್ಲಿ ಸ್ವಲ್ಪ ಜಮೀನಿದ್ದಿತು. ಒಂದು ಎತ್ತು, ಮತ್ತೊಂದು ಕೋಣ ಇವುಗಳಿಂದ ಸೆಲವಳಿತ್ತಿದ್ದನು. ಓದುಬರೆಯುವುದು ಬರುತ್ತಿರಲಿಲ್ಲ. ಪಯಸ್ಸು ಳಿಗೆ ಆಗಿದ್ದಿತು. ಗುಡಿಸಲಿನಲ್ಲಿ ಅವನೊಬ್ಬನೇ ನರ. ಇಷ್ಟು ಮಾತ್ರವಲ್ಲ; ಆತನ ಹೊಟ್ಟೆಯಲ್ಲಿ ಜಲಂಧರ ರೋಗವೂ ಇದ್ದಿತು. ದೇಹದ ಬಣ್ಣ ಕಪ್ಪು. ಇಂತಹ ಮನುಷ್ಯನನ್ನು ಹುಡುಕಿಯೇ ಮಾಹಿಲನು ತನ್ನ ಕಿರಿ ತಂಗಿಯನ್ನು ವಿವಾಹ ಮಾಡಿಕೊಟ್ಟಿದ್ದನು.

— ೨ —

ಮಲನೆಯು ಗಂಡನ ಮನೆಯನ್ನು ಸೇರಿದ ಮೇಲೆ ಊಟಪಾಟವೆಲ್ಲವನ್ನೂ ಬಿಟ್ಟುಬಿಟ್ಟಳು. ದೇವರಲ್ಲಿ ಮೊರೆಯಿಡುವುದು, ಅಳುವುದು, ಇವೆರಡೇ ಆಕೆಯ ಕೆಲಸವಾಗಿದ್ದಿತು. ಒಂದು ದಿನ ಸೋಮವಾರ ಬಂದಿತು. ಮಲನೆಯು ಯಾವಾಗಲೂ ಸೋಮವಾರ ವ್ರತವನ್ನು ಮಾಡುತ್ತಿದ್ದಳು. ಈಶ್ವರನ ಉಪಾಸನೆಯನ್ನು ಭಕ್ತಿಯಿಂದ ಮಾಡುತ್ತಿದ್ದಳು. ನಿತ್ಯವೂ ಪಂಚಾಕ್ಷರೀ ಮಹಾಮಂತ್ರವನ್ನು ಮೂರು ಸಾವಿರದ ವರೆಗೆ ಜಪಿಸುತ್ತಿದ್ದಳು. ಸೋಮವಾರ ದಿನ ವ್ರತಮಾಡಿ ೫೦ ಸಾವಿರ ಜಪಮಾಡುತ್ತಿದ್ದಳು. ಆ ದಿನ ಗ್ರಾಮದ ಹುಡುಗ ಹುಡುಗಿಯರಿಗೆ ಊಟ ಹಾಕುತ್ತಿದ್ದಳು. ಈ ದಿನವೂ ಸೋಮವಾರವಾಗಿದ್ದಿತು. ಮನೆಯಲ್ಲಿ ತಿನ್ನಲು ಏನೂ ಇರಲಿಲ್ಲ. ಅಣ್ಣನು ಸಿಟ್ಟಿನಿಂದ ಏನನ್ನೂ ತಂದಿದೆ ಕೊಟ್ಟಿರಲಿಲ್ಲ.

ಈದಿನ ಭೋಜನ ಸಮಾರಂಭವು ಹೇಗೆ ನಡೆಯುವುದು? ಮಲನೆಯು ಬಿಕ್ಕಿಬಿಕ್ಕಿ ಅಳತೊಡಗಿದಳು. —"ಶಿವಾ! ಪರಮೇಶ್ವರಾ! ಪ್ರಭೂ! ಈಶ್ವರನ ಪಕ್ಷವನ್ನು ವಹಿಸಿದ್ದರಿಂದ ನನ್ನ ಅಣ್ಣನು ನನಗೆ ಇಂತಹ ದುರ್ದಶೆಯನ್ನಿತ್ತನು. ಮುದುಕನೂ, ರೋಗಿಯೂ, ದರಿದ್ರನೂ ಆದ ರೈತನ ಕೈಸೇರಿದೆನು. ಪರಮಾತ್ಮನು ಪರ್ವತವನ್ನು ಸಾಸಿವೆಯನ್ನಾಗಿಯೂ, ಸಾಸಿವೆಯನ್ನು ಪರ್ವತವನ್ನಾಗಿಯೂ ಮಾಡಬಲ್ಲನೆಂದು ಕೇಳುತ್ತಿದ್ದೆನು. ಈ ಮಲನಾ ರೂಪವಾದ ಸಾಸಿವೆಯನ್ನು ಪರ್ವತವನ್ನಾಗಿ ಮಾಡಿದರೆ. ಮತ್ತು ಆ ಮಹಿಲಾ ರೂಪವಾದ ಪರ್ವತವನ್ನು ಸಾಸಿವೆಯನ್ನಾಗಿ ಮಾಡಿದರೆ, ಆಗ ನಾನು ನಂಬಬಲ್ಲೆನು. ಅಂತರ್ಯಾಮಿ! ಪರಮೇಶ್ವರ! ನಿನ್ನ ವಿರುದಿನ ವಿಚಾರವನ್ನು ಮಾಡುವುದಿಲ್ಲವೆ? ನನ್ನ ಸ್ಥಿತಿಯನ್ನು ಸುಧಾರಿಸು, ಇಲ್ಲವೇ ನನಗೆ ಮರಣಪ್ರಾಪ್ತವಾಗುವಂತೆ ದಯಪಾಲಿಸು. ನನಗಂತೂ ಈಗಿನ ಜೀವನವು ಸಹಿಸಲಸಾಧ್ಯವೆನಿಸಿದೆ. ದೇವಾ! ಕೃಪೆಯಿಟ್ಟು ನನ್ನ ಕಡೆಗೆ ಈ ದೀನಳ ಕಡೆ ನೋಡು ಉಪೇಕ್ಷಿಸಬೇಡ. ಕರುಣಿಸು." ಎಂದು ಮುಂತಾಗಿ ಪ್ರಾರ್ಥಿಸುತ್ತಾ, ಮಲನೆಯು ಹಾಗೆಯೇ ಅಲ್ಲಿಯೇ ಮೈಮರೆತಳು. ಆ ಸ್ಥಿತಿಯಲ್ಲಿಯೇ ಸ್ವಪ್ನವಾದಂತಾಗಿ, ಪರಮೇಶ್ವರನು "ಇಂದು ರಾತ್ರಿ ಎಚ್ಚೆತ್ತಿರು" ಎಂದು ಆಜ್ಞೆಮಾಡಿದಂತೆ ಮಲನೆಗೆ ಅನುಭವವಾಯಿತು.

— ೩ —

ಸೋಮವಾರ ರಾತ್ರಿಯಾಯಿತು. ಹಗಲೆಲ್ಲಾ ಹಸಿದು, ಬಾಯಾರಿದ ಮತ್ತು ದುಃಖದಿಂದಳುತ್ತಿದ್ದ ಮಲನೆಯು, ರಾತ್ರಿಯಲ್ಲಿ ಎಚ್ಚೆತ್ತಿರಲು ಕುಳಿತುಕೊಂಡಳು. ಸ್ವಪ್ನದಲ್ಲಾದ ಈಶ್ವರನ ಆಜ್ಞೆಯನ್ನು ಪಾಲಿಸಲು ರಾತ್ರಿ ಜಾಗರೂಕಳಾಗಿ ಕುಳಿತಳು, ಮೆಲ್ಲಮೆಲ್ಲಗೆ ಅರ್ಧ ರಾತ್ರಿಯಾಯಿತು. ಪ್ರಪಂಚವೆಲ್ಲವೂ ನಿದ್ರೆಯಲ್ಲಿ ತೇಲಾಡುತ್ತಿದ್ದಿತು. ಮಲನೆಗೆ ಮಾತ್ರ ನಿದ್ರೆಯ ಸೋಂಕೂ ಇರಲಿಲ್ಲ. ನಿಜವಾದ ಮಾತನ್ನು ನುಡಿದುದಕ್ಕಾಗಿ ಮಾಹಿಲ ರಾಜನು ಸೋದರಿಯನ್ನು ನರಕಕ್ಕೆ ತಳ್ಳಿಬಿಟ್ಟಿದ್ದನು. ತನಗೆ ಹಿತವಾಗುವಂತೆ ಮಾತನಾಡಲಿಲ್ಲ ವೆಂಬುದೊಂದು ಚಿಕ್ಕ ಕಾರಣದಿಂದ ಒಬ್ಬ ಸಹೋದರನು ತನ್ನ ತಂಗಿಗೆ ಶತ್ರುವೂ ಕೊಡಲಾರದಷ್ಟು ದುಃಖವನ್ನುಂಟುಮಾಡಿದ್ದನು.

ಗುಡಿಸಿಲಿನ ಹತ್ತಿರ ಮಾವಿನಮರವೊಂದಿದ್ದಿತು. ಬೆಳದಿಂಗಳು ಹಾಲು ಹೊಯ್ದಂತಿದ್ದಿತು. ಮರದ ಕೊಂಬೆಯ ಮೇಲೆ ಒಂದು ಕಾಗೆಯು ಕುಳಿತಿದ್ದಿತು. ಮರದ ಬುಡದಲ್ಲಿ ಕಾಳಸರ್ಪವೊಂದು ಮಲಗಿದ್ದಿತು. ಅವೆರಡೂ ಸಂಭಾಷಣೆಮಾಡತೊಡಗಿದವು. ಮಲನೆಯು ಹೃದಯದಲ್ಲಿ ಆಗ ಸಾಕ್ಷಾತ್ ಶಿವನೇ ಪ್ರಕಟನಾದನು

"ಸರ್ಪ ಮತ್ತು ಕಾಗೆಯ ಸಂಭಾಷಣೆಯನ್ನು ಆಲಿಸು" ಎಂದು ಹೃದಯದೊಳಗೆ ಯಾರೋ ಹೇಳಿದಂತಾಯಿತು. ಮಲನೆಯು ಉತ್ತರವಿತ್ತಳು—"ನನಗೆ ಇವುಗಳ ಭಾಷೆಯು ತಿಳಿಯದು". ಒಳಗೆ ತಿರುಗಿ ಕೇಳಿಸಿತು—"ಅವುಗಳ ಮಾತಿನ ಅರ್ಥವನ್ನು ನಾನು ತಿಳಿಸುವೆನು ಇವುಗಳ ಸಂಭಾಷಣೆಯಂತೆ ಕೆಲಸ ಮಾಡಿದರೆ. ನಿನ್ನ ಕಷ್ಟವೆಲ್ಲವೂ ದೂರವಾಗಿ ಸುಖವು ಸಿಗುವುದು. ಮಲನೆಯು ಎಚ್ಚರಿಕೆಯಿಂದ ಕುಳಿತುಕೊಂಡಳು. ಸರ್ಪ ಮತ್ತು ಕಾಗೆಗೆ ನಡೆದ ಸಂಭಾಷಣೆಯ ಅರ್ಥವನ್ನು ಬೋಲಾನಾಥನು ಈ ರೀತಿಗೆ ಮಲನೆಗೆ ತಿಳಿಸಿದನು—

ಸರ್ಪವು ಕಾಗೆಯೊಡನೆ ಮಾತನಾಡಿತು—"ಜಗತ್ತೆಲ್ಲವೂ ನಿದ್ರಿಸುತ್ತಿದೆ. ನಿನ್ನ ಗುಣಗಾನವನ್ನು ಕೇಳುವವರು ಯಾರೂ ಇಲ್ಲ. ನೀನು ನನ್ನ ಮೊಟ್ಟೆಗಳನ್ನು ತಿಂದುಹಾಕಿರುವಿ. ಆದ್ದರಿಂದ ನಿನ್ನ ಮೇಲೆ ಆಕ್ರಮಣ ಮಾಡುವೆನು. ನನ್ನ ನಿನ್ನೆ ವೈರವು ಪುರಾತನ ಕಾಲದಿಂದ ಬಂದಿದೆ. ಆದ್ದರಿಂದೀಗ ನಿನ್ನ ಸ್ಥಿತಿಯನ್ನು ಹೊರಗೆಡುವುತ್ತೇನೆ. ಯಾರಾದರೂ ಬಿಸಿ ತೈಲವನ್ನು ಈ ಸರ್ಪದ ಬಿಲಕ್ಕೆ ತುಂಬಿಸಿದ್ದೇಆದರೆ, ಇದು ಸತ್ತು ಹೊರಗೆ ಬರುವುದು. ಆಮೇಲೆ ಆ ಬಿಲದಲ್ಲಿ ಐದು ಮೊಳ ಹೊಂಡವನ್ನು ತೋಡಬೇಕು. ಆಗ ಸ್ಪರ್ಶಮಣಿಯು ಸಿಗುವುದು. ಅದು ಸಿಕ್ಕಿದ ಮೇಲೆ ಆ ಮನುಷ್ಯನು ತಾನಾಗಿಯೇ ದೊಡ್ಡ ರಾಜನಾಗಿ ಬಿಡುವನು".

[ಸಶೇಷ

ವಿವಿಧ ವಿಷಯಗಳು

ಒರ್ಲಿ ಪೋಳೀಸಿನವರು ಒಂದೇ ದಿನದಲ್ಲಿ 2354 ವೋಟಾಯಿ ಅನಾಹುತಗಳನ್ನು ವಿಚಾರಣೆಗೊಳಪಡಿಸಿರುಪರು. ಅಬ್ಬಬ್ಬಾ!

ಬಳ್ಳಾರಿ, ಕಡಪ, ಕರ್ನೂಲು, ಅನಂತಪುರ ಜಿಲ್ಲೆಗಳಲ್ಲಿರುವ ಕ್ಷಾಮಬಂಧೆಯ ನಿವಾರಣೆಗಾಗಿ ಧರ್ಮವರದಲ್ಲಿ ಒಂದು ಯಜ್ಞವನ್ನು ಮಾಡಲಿರುವರು.

ಮದ್ರಾಸಿನಲ್ಲಿ ಇನ್ನು ಮುಂದೆ ಸ್ತ್ರೀ ಖೈದಿಗಳನ್ನು ಕರೆದುಕೊಂಡು ಹೋಗಲು ಸ್ತ್ರೀ ಕಾಂಸ್ಟೇಬಲ್‌ಗಳನ್ನು ನಿಯಮಿಸಬೇಕೆಂದು ಯೋಚಿಸುತ್ತಿರುವರು.

ವಿದುರಾಶ್ವತ್ಥದಲ್ಲಿ ಹೊಸದಾಗಿ ವೇದ ಪಾಠಶಾಲೆಯೊಂದನ್ನು ಸ್ಥಾಪಿಸಿರುವರು. 15 ಮಂದಿ ಬಡವರಾದ ಬ್ರಾಹ್ಮಣರಿಗೆ ಉಚಿತವಾಗಿ ಆಹಾರವನ್ನು ಕೊಟ್ಟು, ವೇದಾದಿಗಳನ್ನು ಕಲಿಸಲು ಏರ್ಪಾಡು ಮಾಡಿರುವರು.

ಬಿಸಿವಾ ಲೀಗ್ ಆಫ್ ನೇಷನ್ಸ್ ನಿಂದ ಯಾವ ಪ್ರಯೋಜನವೂ ಇರುವುದಿಲ್ಲವೆಂದು ನಿರೂಪಿಸಲು ಬರ್ನಾರ್ಡ್ ಷಾ ರವರು ಒಂದು ನಾಟಕವನ್ನು ರಚಿಸುತ್ತಿರುವಂತೆ ತಿಳಿಯಬಂದಿದೆ. ಜಿನೀವಾ ಸಮಿತಿಯೊಂದಿಗೆ ಸಂಬಂಧವನ್ನು ಪಡೆದಿರುವ ದೇಶಗಳ ವರ್ತನೆಯನ್ನು ಈ ನಾಟಕದಲ್ಲಿ ವಿಮರ್ಶಿಸಬಹುದೆಂದು ತೋರುತ್ತದೆ.

ಅತಿ ವಿಚಿತ್ರವಾದ ಕಾನೂನುಗಳು ಈಜಿಪ್ಟಿಗೆ ಜಾರಿಗೆ ಬರುತ್ತಲಿವೆ. ಇನ್ನು ಮುಂದೆ ಇನ್ನೂ ವಿಚಿತ್ರವಾದ ಕಾನೂನುಗಳು ಜಾರಿಗೆ ಬರಲಿರುವವು. ವಿವಾಹಕ್ಕೆ ತೆರಿಗೆ ಯಾರಾದರೂ ಸತ್ತಲ್ಲಿ ಅವರಿಗೆ ಕರ್ಮ ಮಾಡುವ ಕಾಲದಲ್ಲಿ ೫೧ ಮಂದಿಗಿಂತ ಹೆಚ್ಚಾಗಿ ಊಟಕ್ಕೆ ಕರಿಯಕೂಡದೆಂದೂ ತಾಮ್ರದ ಪಾತ್ರೆಗಳು ಮೊದಲಾದವನ್ನು ದಾನ ಮಾಡಕೂಡದೆಂತಲೂ ಕಾನೂನು, ಇದ್ದರೆ ತೆರಿಗೆ ಹೋದರೆ ತೆರಿಗೆ ನಿಂತರೆ ತೆರಿಗೆ, ಕೂತರೆ ತೆರಿಗೆ, ಮಲಗಿದರೆ ತೆರಿಗೆ, ಮಾತನಾಡಿದರೆ ತೆರಿಗೆ ಇನ್ನೂ ಏನೇನೋ ವಿಚಿತ್ರಗಳು ನಡೆಯಲಿವೆ. ಕಾಲಜ್ಞಾನವನ್ನು ಓದಿ ನೋಡಿ, ಯಾವುದೂ ಸುಳ್ಳಲ್ಲ.

ರಾಂಚೀ ನಿವಾಸದಲ್ಲಿಯ ದೇವಾಲಯದೊಳಕ್ಕೆ ಯಾರು ಹೋದರೂ, ದೇವಾಲಯದ ಬಾಗಿಲ ಮೇಲೆ ತೂಬಿರುವ ಜೇಸುಸೊಣಗಳು ಸುಮ್ಮನಿರುವವೆಂದೂ, ಮಹಾ ದೇಯರು ಪ್ರವೇಶಿಸಿದಲ್ಲಿ ತೊಂದರೆಪಡಿಸುವುವೆಂದೂ ತಿಳಿಯಬಂದಿದೆ. ಇದಕ್ಕೆ ಕಾರಣವೇನೋ ಯಾರಾದರೂ ಹೇಳಿಯಾರೆ? ಹೀಗೆಯೇ ಮುಂಬೈ ಮಾರ್ಗದಲ್ಲಿ ಬೆಟ್ಟದ ಮೇಲೆ ಪರಶನಾಥ ದೇವಾಲಯವಿದೆ. ವಿದೇಶಸ್ಥರು ಯಾರಾದರೂ ಹೋದಲ್ಲಿ, ಹಾವುಗಳು ಅವರನ್ನು ಕಡಿಯಲು ಬರುವುವು. ಮಿಕ್ಕವರನ್ನು ಏನೂ ಮಾಡುವುದಿಲ್ಲ. ಇದು ಪಾಶ್ಚಾತ್ಯರಿಗೂ ದಿಗ್ಭ್ರಮೆಯನ್ನುಂಟು ಮಾಡಿದೆ.

ಸ್ತ್ರೀಯರಿಗೆ ಆಡಳಿತ ಬೇಕಂತೆ!

ಒಂದು ಪ್ರಾಂತ್ಯದ ಆಡಳಿತವನ್ನು ಫಕತ್ ಸ್ತ್ರೀಯರಿಗೇ ವಹಿಸಬೇಕೆಂದೂ ಅವರು ಐಕ್ಯತೆ, ಶಕ್ತಿ, ಸಾಮರ್ಥ್ಯದಿಂದ ನಿರ್ವಹಿಸುವರೆಂದೂ ಅಹಮದಾಬಾದಿನ ಮಾಟಿಂಗಿನಲ್ಲಿ ಒಬ್ಬರ ಉದ್ಗಾರ!

ಎರಡೇ ರೂ. ನಲ್ಲಿ ಮುಂಜಿ

ಬೌಧ ಅರಸರ ಭಾಷಣಸಾರ

ನಾವು ನಮ್ಮ ಮಕ್ಕಳ ಮುಂಜಿಗಾಗಿ ಕಡಿಮೆಯೆಂದರೂ ೧೦-೨೦ ಸಾವಿರ ರೂ. ಗಳನ್ನು ಖರ್ಚುಮಾಡಬಹುದಾಗಿತ್ತು. ಆದರೆ ಮುದ್ದಾಂ ಹಾಗೆ ಮಾಡದೆ ತಮ್ಮೆಲ್ಲರಿಗೂ ತೋರಿಸಿ ಕೊಡುವ ಸಲುವಾಗಿಯೇ ನಾವು ಅರಸುಮಕ್ಕಳ ಮುಂಜಿಯನ್ನು ಐದೇ ರೂಪಾಯಿನಲ್ಲಿ ಸ್ವತಃ ಮೊನ್ನೆ ಮಾಡಿರುತ್ತೇವೆ. ಇದರ ಅನುಕರಣವು ಬೌಧದಲ್ಲಿ ಬೇಗನೆ ಬಹುಜನರು ಮಾಡುವದನ್ನು ನೋಡಿ ನನಗೆ ಸಂತೋಷವಾಗಿರುತ್ತದೆ. ನನ್ನ ಎಲ್ಲ ಪ್ರಜೆಗಳಿಗೆ ನಾನು ಬಿನ್ನವಿಸುವದೇನೆಂದರೆ—ಇನ್ನು ಮುಂದೆ ೧೫೫ ರೂ. ನಲ್ಲಿ ಲಗ್ನ; ೨ ರೂ. ನಲ್ಲಿ ಮುಂಜಿ, ಮಾಡುವ ಪದ್ಧತಿಯನ್ನಿಟ್ಟುಕೊಳ್ಳುವವರಾಗಿರಿ.

ವಧುವನ್ನು ಎತ್ತಿಕೊಂಡು ಹೋದರು

ಲಗ್ನಕ್ಕೆ ಇನ್ನು ಸ್ವಲ್ಪ ವೇಳೆ ಇರುವಾಗ ಲಗ್ನದ ವಧುವು ಇದ್ದಲ್ಲಿಯೇ ಮಾಯವಾಯಿತು ಎಂಬ ಸಮಾಚಾರವು ಬಂದಿದೆ. ಈ ಹುಡುಗಿಯ ತಂದೆಯು ಮನೆಯಿಂದ ಹೊರಗೆ ಹೋದಾಗ, ಯಾರಿಗೆ ಈ ಹುಡುಗಿಯನ್ನು ಕೊಡುವುದಕ್ಕೆ ಇವಳ ತಂದೆಯು ತಿರಸ್ಕರಿಸಿದ್ದನೋ ಆ ಮನುಷ್ಯನು ಕೆಲವು ಆಳು ಜನರೊಂದಿಗೆ ಮನೆಯನ್ನು ನುಗ್ಗಿ ಲಗ್ನದ ಹುಡುಗಿಯನ್ನು ಅಪಹರಿಸಿದರು

ಟ್ರಾವಂಕೂರು ಬ್ಯಾಂಕು

ಟ್ರಾವಂಕೂರು ಬ್ಯಾಂಕು ಸ್ಥಿತಿ ವಿಚಾರವನ್ನು ರಿಜರ್ವ್ ಬ್ಯಾಂಕಿನವರು ತಪಾಸಣೆ ಮಾಡಲು ಪ್ರಾರಂಭಿಸಿರುವುದಾಗಿ ತಿಳಿಯಬಂದಿದೆ.

ಹೆಣ್ಣು ಮಕ್ಕಳ ವ್ಯಾಪಾರ

ಯುದ್ಧದಿಂದ ಚೀನಾದಲ್ಲಿ ಗುಲಾಮರ ವ್ಯಾಪಾರವು ಹೆಚ್ಚಾಗಿದೆ. ಚೀನಾ ದೇಶದ ಮುಖ್ಯ ಪಟ್ಟಣಗಳಾದ ಕ್ಯಾಂಟನ್, ಸ್ವಾಬೋ ಆಮಿ, ಮತ್ತು ಇತರ ಉತ್ತರ ಪ್ರದೇಶದ ನಗರಗಳಲ್ಲಿ ಯುದ್ಧ ಭೀತಿಯಿಂದ ತಪ್ಪಿಸಿಕೊಳ್ಳಲ. ರಕ್ಷಣೆಗಾಗಿ ಬಂದಿರುವ ಹೆಣ್ಣು ಮಕ್ಕಳನ್ನು ಗುಲಾಮ ವ್ಯಾಪಾರಿಗಳು ಒಟ್ಟೊಟ್ಟಿಗೆ ಕೊಂಡುಕೊಂಡು ಹಾಂಗ್‌ಕಾಂಗಿಗೆ ತರುವರು. ಅಲ್ಲಿ ಗುಟ್ಟಾಗಿ ಅವರನ್ನು ಮಾರುವರು. ಒಬ್ಬೊಬ್ಬ ಹುಡುಗಿಯನ್ನು ೧೫೦ ರೂ. ನಿಂದ ೨೦೦ ರೂ. ವರೆಗೆ ಮಾರುತ್ತಿರುವರು.

Suggestions to Competitions

Commonsense Cross Word No. 127

Across :—

1. Success 5. Glad 7, Null 8. Pile 9. No 10. Wink, Pink 12. Bitter, Better 13. Care, Fare 14. Cheat, Cheap 16. Bah 18. Plapa 21. Lanate 23. Strap 26. Kine 27. Satan 30. Stilled, Stilted 33. Airy 34. Wiles, Wives 35 Craver, Graver, Braver.

Down :—

1. Snob, Snub 2. Clutch 3. Spiral 4. Sin 6. Doze, Dope, Dose 10. Peep, Week 11. Fad, Fat 13. Crank, Frank, Prank 15. Pall, Tall Tale 16. Bus 17. Arts, Acts 19. Beery Beefy 20. Battle, Rattle, Tattle 22. Aim, Air, Aid 24. Ras 25. Pairs 28. Bear, Near 29. Law, Maw, Saw 31. Dia 32. Eye.

ಸ್ಪರ್ಧೆಗಳಿಗೆ ಸಲಹೆ

ಚಿತ್ರಶಾಲಾ ನಂ. ೫೪

ಎಡದಿಂದ ಬಲಕ್ಕೆ

1 ಪರಮಾತ್ಮ 3 ಪ್ರಜ್ಞಾನಿಯು, ವಿಜ್ಞಾನಿಯು, ಸುಜ್ಞಾನಿಯು. 6 ಯಾತ್ರಿ, ಮಂತ್ರಿ, ಹೋತ್ರಿ ಕೂತ್ರಿ. 7 ನ್ಯದಜ್ಯಮ. 12 ಧನಹೀನ. 14 ರಾಜಪತ್ನಿ. 19 ಜಿನಿವಾರ 20 ಕುಂದಿಲ್ಲದ, ಕಂದಿಲ್ಲದ 21 ಪತಿ, ಗತಿ. 22 ನವರತ್ನ. 23 ಬಿಳಪಾಗಿ, ತೆಳುಪಾಗಿ.

ಮೇಲಿಂದ ಕೆಳಕ್ಕೆ

1 ಪಲಾಯನ 2 ಮಾನ, ಧನ 4 ಜ್ಞಾನೋದಯ 5 ಯುಕ್ತಿವಂತ 9 ಹೀನ ಜನ. 10 ಮಹೀಪತಿ 11 ಶ್ವಾನ, ದನ 13 ಭಯ, ಜಯ. 15 ಬಂಜೆತನ. 16 ದಿವಾಕರ. 17 ಬಂದಿಗಳು. 18 ಅಂದವಾಗಿ.

ಸತ್ಯಾಗ್ರಹ ಸೊಂಕು

ಹೈದರಾಬಾದ್, ಇಂದೂರು ಸಂಸ್ಥಾನದಲ್ಲಿದ ಹಕ್ಕಿನ ಬಗ್ಗೆ ಸತ್ಯಾಗ್ರಹ ನಡೆಸಲು ಏರ್ಪಾಡುಗಳು ನಡೆಯುತ್ತಿವೆ.

ಜೋಧಪುರ

ಇಲ್ಲಿಯ ಸರ್ಕಾರದವರು ಸಂಸ್ಥಾನದ ಎಲ್ಲಾ ಸ್ಕೂಲುಗಳಲ್ಲಿಯೂ ನೂಲು ತೆಗೆಯುವುದು ಮತ್ತು ನೆಯ್ಯುವುದು ಇವನ್ನು ಕಲಿಸಲು ಏರ್ಪಡಿಸಿರುತ್ತಾರೆ.

ರೇಡಿಯಂಟ್ ಸ್ಪರ್ಧೆ ನಂ. 15 ಬಹುಮಾನ ರೂ. ೨೦

ಮೊದಲನೇ ಬಹುಮಾನ ರೂ 10 ಇತರ ಬಹುಮಾನಗಳು ರೂ. 10 ಪ್ರವೇಶ ಧನ ಪ್ರತಿ ಉತ್ತರಕ್ಕೂ ಒಂದಾಣೆ

ಕಡೆಯ ತಾ|| 24—7—38 ; ಉತ್ತರವು ತಾ|| 27—7—38 ಸತ್ಯವಾದಿಯಲ್ಲಿ ಪ್ರಕಟಿಸಲ್ಪಡುವುದು

ನಿಯಮಗಳು—ನೊಪರು ಮಾಡಿಇಟ್ಟಿರುವ ಉತ್ತರಕ್ಕೆ ಸರಿಹೋಲುವ ಉತ್ತರಕ್ಕೆ ಮೊದಲನೆ ಬಹುಮಾನವೂ, ಒಂದು ತಪ್ಪಿನದಕ್ಕೆ ಎರಡು ಬಹುಮಾನವೂ ಕೊಡಲಾಗುತ್ತೆ. ಸರಿಯಾದ ಉತ್ತರಗಳು ಹೆಚ್ಚಾಗಿ ಬಂದಲ್ಲಿ ಅನಕ್ಕೆ ಹಂಚಲಾಗುವುದು. ಪ್ರವೇಶಧನ ಪ್ರತಿ ಉತ್ತರಕ್ಕೂ 1 ಆಣೆ ಪೋಸ್ಟೇಜು ಸ್ಟಾಂಪುಸಹ ಕಳುಹಿಸಬಹುದು. ಉತ್ತರಗಳ ಸಂಖ್ಯೆಗನುಗುಣವಾಗಿ ಬಹುಮಾನವು ಹೆಚ್ಚು ಕಡಮೆ ಮಾಡಲಾಗುವುದು. ಮ್ಯಾನೇಜರ್ ತೀರ್ಮಾನಕ್ಕೆ ಎಲ್ಲರೂ ಬದ್ಧರಾಗಿರಬೇಕು. ಉತ್ತರಗಳನ್ನು ಕಳುಹಿಸುವವರು ಸತ್ಯವಾದಿ ಕೂಪನ್ನಿನಲ್ಲಿ ಬರೆಯಬೇಕು. ಹೆಚ್ಚು ಉತ್ತರಗಳನ್ನು ಕಳುಹಿಸುವವರು ಒಂದು ಉತ್ತರವನ್ನು ಸತ್ಯವಾದಿ ಕೂಪನ್ನಿನಲ್ಲಿ ಬರೆದು ಬಾಕಿ ಉತ್ತರಗಳನ್ನು ಖಾಲಿ ಕಾಗದದಲ್ಲಿ ಬರೆದು ಕಳುಹಿಸಬಹುದು.

ಎಡದಿಂದ ಬಲಕ್ಕೆ

1 ಈಶ್ವರನಿಂದ ದಹಿಸಲ್ಪಟ್ಟವನು. 2 ಮಾನವನ ಪ್ರಗತಿಗೆ ಇದು ಆವಶ್ಯಕ. 3 ಇದರಿಂದ ಮರವನ್ನು ಕೊಯ್ಯುತ್ತಾರೆ 6 ಒಂದು ಲೋಹ. 8 ಉದ್ಯೋಗ.

ಮೇಲಿಂದ ಕೆಳಕ್ಕೆ

1 ಮಾನವ 4 ಹುಡುಗ (ಸ್ಥಳಪಲ್ಲಟ). 5 ಚಿಕ್ಕ ಪ್ರಾಣಿ 7 ಇದರವಿಷಯದಲ್ಲಿ ಸ್ತ್ರೀಯರಿಗೆ ಸಮತೆ ಹೆಚ್ಚು. 8 ತುಂಬಾ ನೀರುಳ್ಳ .....ಯು ನೋಡಲು ರಮ್ಯವಾಗಿರುತ್ತೆ. 9 ಸ್ನೇಹಿತೆ 10 ಹನುವಂತನ.....ವು ಪ್ರಖ್ಯಾತವಾದುದು (ತಾರಮಾರು)

1 ಮ				2	ಣ
		3 ಗ	ರ		
	4 ಬಾ		5		
6		ಚ್ಚಿ			7 ಸೊ
8		9 ಸ		10	
ರೆ			ಬಾ		

ರೇ. ೧೫

ಕೂಪನ್ ನಂ..... ತಾ||.....

ಹೆಸರು.....

ವಿಳಾಸ.....

ವಿ. ಸೂ.—ಈ ಸ್ಪರ್ಧೆಯಲ್ಲಿ ಭಾಗವಹಿಸುವವರು ನಮ್ಮ ಆಫೀಸಿಗಾಗಲಿ, ಮೈಸೂರು ಲ್ಯಾನ್ಸ್‌ಡೌನ್ ಬಜಾರಿನಲ್ಲಿರುವ ರೇಡಿಯಂಟ್‌ನ್ಯೂಸ್ ಏಜೆನ್ಸಿಗಾಗಲೇ ಪಾವತಿ ಮಾಡಬಹುದು.

ಮ್ಯಾನೇಜರ್, ರೇಡಿಯೆಂಟ್‌ಸ್ಪರ್ಧೆ,
ಸತ್ಯವಾದಿ ಆಫೀಸು, ಚಾಮರಾಜಪುರಂ, ಮೈಸೂರು.

ವಾಚಕ ಮಹಾಶಯರಲ್ಲಿ ವಿನಂತಿ

ಅತಿ ಸುಲಭ ಚಂದಾದರದ ಮತ್ತು ಸಚಿತ್ರವೂ ಆದ, ವಾರವಾರವೂ ವಿವಿಧ ವಿಚಾರಗಳಿಂದಲೂ, ಉತ್ತಮ ವಿಷಯಗಳಿಂದಲೂ, ಸ್ಪರ್ಧೆಗಳ ಸಲಹೆ, ಕಥೆ ಮುಂತಾದವುಗಳಿಂದಲೂ ಒಡಗೂಡಿರುವ ಸತ್ಯವಾದಿ ಪತ್ರಿಕೆಗೆ ತಾವೂ ಚಂದಾದಾರರಾಗಿದ್ದು ತಮ್ಮ ಸ್ನೇಹಿತರನ್ನೂ ಚಂದಾದಾರರನ್ನಾಗಿ ಮಾಡಿಕೊಟ್ಟು ಹೆಚ್ಚು ಹೆಚ್ಚಾಗಿ ಸಹಾಯಮಾಡಬೇಕಾಗಿ ಕೋರುತ್ತೇವೆ.

—ಆರ್ಡರ್ ಫಾರಂ—

ಮ್ಯಾನೇಜರ್, ಸತ್ಯವಾದಿ ಆಫೀಸು, ಮೈಸೂರು—

ನನ್ನನ್ನು ತಮ್ಮ ವಾರಪತ್ರಿಕೆಗೆ ಚಂದಾದಾರನನ್ನಾಗಿ ಸೇರಿಸಿಕೊಂಡು, ಪತ್ರಿಕೆಯನ್ನು ದಯವಿಟ್ಟು ಕಳುಹಿಸಿ ಕೊಡಬೇಕಾಗಿ ಕೋರುತ್ತೇನೆ. ಇದಕ್ಕಾಗಿ ತಮಗೆ ಮಣಿ ಆರ್ಡರ್ (ಪೋಸ್ಟಲ್ ಆರ್ಡರ್) ಮೂಲಕ ಒಂದು ವರ್ಷದ (ಮೂರು ತಿಂಗಳುಗಳ) ಚಂದಾವನ್ನು ಕಳುಹಿಸಿದೆ.

	೧ ವರ್ಷಕ್ಕೆ	೩ ತಿಂಗಳಿಗೆ
ಸ್ಥಳದವರಿಗೆ	೧-೦-೦	೦-೪-೦
ಪರಸ್ಥಳದವರಿಗೆ	೧-೧೦-೦	೦-೮-೦

ಹೆಸರು ಮತ್ತು ಅಡ್ರೆಸ್

ನು ನ ಮ ಯ!

ಇಲ್ಲಿ ಎಲ್ಲಾ ತರದ ಕೋಟಿಂಗ್ಸ್, ಪರ ಟಿಂಗ್ಸ್ ಮತ್ತು ಎಲ್ಲಾ ಸೈಜು ಕಾರ್ಟ್, ಉಲ್ಲ್ ಸ್ವೆಟರ್ಸ್‌ಗಳೂ ಸುಲಭ ಬೆಲೆಗೆ ದೊರೆಯುತ್ತವೆ. ಮತ್ತು ಬಟ್ಟೆಗಳನ್ನು ಅಂದವಾಗಿಯೂ, ಮಸ್ತು ಒಪ್ಪುವಂತೆಯೂ ಹೊಲೆದು ಕೊಡುತ್ತೇವೆ

ವಿಳಾಸ—

ಶ್ರೀ ಪರಶುರಾಂ ಹಾಲ್,
ಸಯ್ಯಾಜಿರಾವ್ ರೋಡು, ಮೈಸೂರು.

ಶಕ್ತಿಸುಧಾ

ಉತ್ತಮವಾದ ಟಾನಿಕ್

ಶಕ್ತಿವರ್ಧಕ, ಧಾತುಪುಷ್ಟಿಕವಾದುದು.

ನಿದ್ರಾಭಂಗ, ಸುಸ್ತು ಸಂಕಟ, ಮಲಬಂಧ ನಿವಾರಣೆ ಮಾಡುತ್ತದೆ.

ಸಂಸಾರ ಸುಖಕ್ಕೆ ಹೆಚ್ಚು ಶಕ್ತಿಯನ್ನೂ, ಉತ್ಸಾಹವನ್ನೂ ಕೊಡುತ್ತದೆ.

ಬೆಲೆ 1 ಡಬ್ಬಿ ರೂ. 1-0-0. ಹೊರಗಿನವರು ರೂ. 1-4-0 ಕಳುಹಿಸಿದರೆ 1 ಡಬ್ಬಿ ಕಳುಹಿಸಲಾಗುತ್ತೆ.

ಅಡ್ರಸ್ : ಶಕ್ತಿಸುಧಾ ಸತ್ಯವಾದಿ ಆಫೀಸ್, ಚಾಮರಾಜಪುರಂ, ಮೈಸೂರು.

Vaidyaratnam P. S. VARIER'S
Arya Vaidya Sala, Kottakkal
Branches — Calicut & Palghat

The pioneer ayurvedic institution in Southern India with over 35 years reputation. The ever increasing popularity of this firm all over India, Burma, Ceylon, Malaya and other colonies alone stands for its unequalled reliability. All sorts of ayurvedic preparations prepared under scientific methods are always kept here in stock for sale. Dhara, Navarakkizhi, Pizhichil and other special treatments of Malabar are conducted under Vaidyaratnam's own supervision Treatment through correspondance a speciality. Vaidyaratnam visits his Calicut branch on almost every 1 st and 3 rd Sundays and Palghat branch on 2 nd and 4 th Sundays.

Chyavanapras Leham

From the time of ancient sages this medicine is reknowned for its unequalled efficacy in retaining youthfulness. It is so termed because Sage Chyavana was able to regain his youth at nineties with its use. It is a great tonic for boys of weak health and it prevents old age in young men. Besides it is very effective in all sorts of Respiratory complaints, Heart diseases, Rheumatism, and many other diseases. Direction — ½ to 2 tolas twice daily after food. Price per pound Rs 4.

For further particulars and free catologues please apply to—

The Manager, Arya Vaidyasala, KOTTAKAL (S. Malabar)

Leading Newspapers & Periodicals

are always available at

☞ **The Radiant News Agency,** Lansdowne Buildings, Mysore

THE COMMERCIAL AGENCY

General Merchants,
Commission Agents,
News Agents, etc.

DEALERS IN
High-grade
Cycles & Accessories
Reliable
Watches & Clocks
Stationery, etc

CHAMARAJA ROAD
MYSORE

Dental Surgery

H S Kamal Sherieff & Bros.
DENTISTS
New Curzon Park Road. and
Lansdowne Buildings, Mysore

We prepare artificial te withthe which any hard substance can be chewed We Extract even the strongest teeth with the greatest ease Stuffing the hollow tooth with gold and silver a speciality. Every work is done toentire satisfaction.

Edited, printed & published by M.S. Krishna Rao, at the Satyavdi Press, Satyavadi Builds., Chamaraj Agrahar, Mysore